ಪಿ.ಡಬ್ಲ್ಯು. 1

(ಇಂದು ದಿನಾಂಕ 07-01-2023 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು - ಪ್ರತಿವಾದಿ ಪರ ಶ್ರೀ ಎಂ.ಎನ್.ಎಸ್. ವಕೀಲರಿಂದ-**

ನಿ.ಡಿ. 7 ರಲ್ಲಿ ಕಂಡುಬರುವ ಚಿರೇಕಲ್ಲುಗಳನ್ನು ಪ್ರತಿವಾದಿಗಳು ತಮ್ಮ ಸ್ವತ್ತಿನಲ್ಲಿ ಕಂಪೌಂಡ ನಿರ್ಮಾಣ ಮಾಡಲು ಶೇಖರಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಚಿರೇಕಲ್ಲುಗಳನ್ನು ನಾನು ಶೇಖರಣೆ ಮಾಡಿರುವುದಾಗಿ ಸುಳ್ಳು ಪ್ರತಿಪಾದನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ.ನಂ. 638 ಹಿಸ್ಸಾ 2 ರ ಪೈಕಿ 0-8-0 ಕ್ಷೇತ್ರ ಪೂರ್ಣವಾಗಿ ನಮ್ಮ ಸ್ವಾಧೀನದಲ್ಲಿ ಇರುವುದಿಲ್ಲ ಹಾಗೂ ಪೋಡಿ ನಕಾಶೆ ಸಹ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ. 638 ಹಿಸ್ಸಾ 2 ರ ಮೂಲ ನಕಾಶೆ ಹಾಗೂ ಪೋಡಿ ನಕಾಶೆಗೆ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಮ್ಮ ಹಕ್ಕಿನ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ನಾವು ವಾದಪತ್ರದಲ್ಲಿ ಹೇಳಿರುವಂತೆ ಯಾವುದೇ ಅತಿಕ್ರಮಣ ಮಾಡಿರುವುದಿಲ್ಲ ಹಾಗೂ ಅತಿಕ್ರಮಿಸುವ ಪ್ರಯತ್ನವನ್ನೂ ಸಹ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ದಿನಾಂಕ 30-12-2016 ರಂದು ನಮ್ಮ ಸ್ವತ್ತಿನ ಸರ್ವೆ ಮಾಡಿಕೊಡುವಂತೆ ನಾನು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ಮುಂದುವರಿದು ದಿನಾಂಕದಲ್ಲಿ ಸ್ವಲ್ಪ ವ್ಯತ್ಯಾಸ ಇರಬಹುದು, ಆದರೆ 2016 ರ ಡಿಸೆಂಬರ್ ತಿಂಗಳಿನಲ್ಲಿ ನಾನು ಅರ್ಜಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸ.ನಂ. 638 ಅ ಹಿಸ್ಸಾ 3 ಬ, ಸ.ನಂ. 638/2 ಬ ಮತ್ತು 636/4 ಬ ಗೆ ಸಂಬಂಧಪಟ್ಟಂತೆ ಸರ್ವೆ ಮಾಡಿಕೊಡುವಂತೆ ಅರ್ಜಿ ಸಲ್ಲಿಸಿರುತ್ತೇನೆ. ಅದೇ ಸಮಯದಲ್ಲಿ ಜೇತನ್ ಫಾಯ್ದೆ ಎಂಬುವವರು ಸ.ನಂ. 636/4 ಅ ಸ್ವತ್ತಿಗೆ ಸಂಬಂಧಪಟ್ಟಂತೆ ಹದ್ದುಬಸ್ತು ಮಾಡಿಕೊಡಲು ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ಇರಬಹುದು. ಸದರಿ ಅರ್ಜಿಗೆ ಸಂಬಂಧಪಟ್ಟಂತೆ ಲಗ್ತುದಾರರಾದ ನಮಗೂ ಸಹ ನೋಟಿಸ್ ನೀಡಲಾಗಿತ್ತು ಎಂದರೆ ಸರಿ.

ದಿನಾಂಕ 19-01-2018 ರಂದು ಭೂಮಾಪಕರು ಜೀತನ್ ಫಾಯ್ದೆರವರು ಸಲ್ಲಿಸಿದ ಅರ್ಜಿಯ ಆಧಾರದ ಮೇರೆಗೆ ಸರ್ವೆ ನಡೆಸಲು ಸ್ಥಳದ ಬಳಿ ಬಂದಿದ್ದರು ಎಂದರೆ ಸರಿ. ಆ ಸಂದರ್ಭದಲ್ಲಿ ನಾನು ಮತ್ತು ಜೀತನ್ ಫಾಯ್ದೆ  ಹಾಜರಿದ್ದೆವು ಎಂದರೆ ಸರಿ. ಸ್ಥಳಕ್ಕೆ ಭೂಮಾಪಕರು ಬಂದ ಸಂದರ್ಭದಲ್ಲಿ ಸ.ನಂ. 636 ಹಿಸ್ಸಾ 4 ರ ಮೂಲ ನಕಾಶೆಗೂ ಸದರಿ ಸರ್ವೆ ನಂಬರನ ಪೋಡಿ ನಕಾಶೆಗೂ ವ್ಯತ್ಯಾಸ ಇರುವ ಬಗ್ಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ನಾನು ಆ ರೀತಿ ಹೇಳಿಕೆ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿ ಭೂಮಾಪಕರ ಸಮಕ್ಷಮ ನೀಡಲಾದ ಹೇಳಿಕೆಯಾಗಿದ್ದು, ಸಾಕ್ಷಿದಾರರು ತಮ್ಮ ಸಹಿ ಇರುವುದನ್ನು ಒಪ್ಪಿದ ಕಾರಣ ಸದರಿ ದಾಖಲಾತಿಯನ್ನು ನಿ.ಡಿ. 10 ಎಂದು ಗುರುತಿಸಲಾಯಿತು. ನಾನು ಸದರಿ ಹೇಳಿಕೆಗೆ ಜೀತನ್ ಫಾಯ್ದೆರವರು ಅವರ ಸ್ವತ್ತಿನ ಗಡಿಗೆ ಸಂಬಂಧಪಟ್ಟಂತೆ ವ್ಯತ್ಯಾಸ ಇರುವುದಾಗಿ ತಿಳಿಸಿದ್ದು ಹಾಗೂ ನನ್ನ ಮಾಲ್ಕಿ ಸ್ವತ್ತಿಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದು ನನಗೆ ಸಹಿ ಮಾಡುವಂತೆ ತಿಳಿಸಿದ ಮೇರೆಗೆ ಸದರಿ ದಾಖಲಾತಿಯನ್ನು ನಾನು ಓದದೇ ಜೀತನ್ ಫಾಯ್ದೆರವರ ಮಾತಿನ ಭರವಸೆಯ ಮೇರೆಗೆ ಸಹಿ ಮಾಡಿರುತ್ತೇನೆ. ನಿ.ಡಿ.10 ರ ದಾಖಲೆಗೆ ನಾನು ಓದಿಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಡಿ.10 ರ ದಾಖಲಾತಿಯನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಕಾಶೆಗಳಲ್ಲಿ ವ್ಯತ್ಯಾಸ ಇರುವುದರ ಬಗ್ಗೆ ನಾನು ಮತ್ತು ಜೀತನ್ ಫಾಯ್ದೆರವರು ಹೇಳಿಕೆ ನೀಡಿದ ಕಾರಣ ಹದ್ದುಬಸ್ತು ಅರ್ಜಿಯನ್ನು ವಿಲೇಗೊಳಿಸಿರುತ್ತಾರೆ ಎಂದರೆ ಸರಿಯಲ್ಲ.

ಜೀತನ್ ಫಾಯ್ದೆರವರ ಲಗತ್ತಾಗಿ ನಮ್ಮ ಸ್ವತ್ತು ಎಂದರೆ ಸರಿ. ನಾನು ಸರ್ವೆ ಮಾಡುವಂತೆ ನೀಡಿದ ಅರ್ಜಿಗೆ ಸಂಬಂಧಪಟ್ಟಂತೆ ದಿನಾಂಕ 20-06-2017 ರಂದು ಸ್ಥಳಕ್ಕೆ ಬರುವುದಾಗಿ ನಮಗೆ ತಿಳುವಳಿಕೆ ಪತ್ರ ನೀಡಿದ್ದರು ಎಂದರೆ ಆ ಬಗ್ಗೆ ನನಗೆ ನೆನಪಿಲ್ಲ, ಆದರೆ ದಿನಾಂಕ 30-06-2017 ರಂದು ಸ್ಥಳಕ್ಕೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಭೂಮಾಪಕರು ಸರ್ವೆ ಕಾರ್ಯ ಮಾಡಲು ಸ್ಥಳಕ್ಕೆ ಬಂದಾಗ

1 ನೇ ಪ್ರತಿವಾದಿಯು ಮೂಲ ನಕಾಶೆಗೂ ಹಾಗೂ ಹಿಸ್ಸಾ ನಕಾಶೆಗೂ ವ್ಯತ್ಯಾಸ ಇರುವುದಾಗಿ ಹಾಗೂ ಅದನ್ನು ಸರಿಪಡಿಸಿದ ನಂತರದಲ್ಲಿ ಸರ್ವೆ ಮಾಡಬೇಕೆಂದು ತಿಳಿಸಿದರು ಎಂದರೆ ಸರಿಯಲ್ಲ. ಆದಕಾರಣ ದಿನಾಂಕ 20-06-2017 ರಂದು ಭೂಮಾಪಕರು ಸರ್ವೆ ನಡೆಸಲು ಬರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ 30-06-2017 ರಂದು ಸ.ನಂ. 638/2ಬ ಸ್ವತ್ತನ್ನು ಮಾತ್ರ ಅಳತೆ ಕಾರ್ಯ ಮಾಡುವುದಾಗಿ ತಿಳುವಳಿಕೆ ಪತ್ರ ನೀಡಿದ್ದರು ಎಂದರೆ ಸರಿಯಲ್ಲ. ನಿ.ಪಿ. 9 ರಲ್ಲಿ ಸ.ನಂ. 638 ಅ ಹಿಸ್ಸಾ 2 ಬ ಮಾತ್ರ ನಮೂದು ಮಾಡಲಾಗಿದೆ ಎಂದರೆ ಸಾಕ್ಷಿಯು ನಾನು ಅರ್ಜಿ ನೀಡಿದ ಮೂರೂ ಸರ್ವೆ ನಂಬರಗಳಿಗೂ ಪ್ರತ್ಯೇಕವಾದ ತಿಳುವಳಿಕೆ ಪತ್ರ ನೀಡಲಾದ ಕಾರಣ ನಿ.ಪಿ.9 ರಲ್ಲಿ ಕೇವಲ ಒಂದು ಸರ್ವೆ ನಂಬರ್ ನಮೂದಿಸಲಾಗಿರುತ್ತದೆ, ಉಳಿದ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ತಿಳುವಳಿಕೆ ಪತ್ರ ನೀಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಉಳಿದ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನೀಡಲಾದ ತಿಳುವಳಿಕೆ ಪತ್ರಗಳನ್ನು ಅವಶ್ಯಕತೆ ಕಂಡುಬರದ ಕಾರಣ ಹಾಜರುಪಡಿಸಿರುವುದಿಲ್ಲ.

ದಿನಾಂಕ 30-06-2017 ರಂದು ಸ.ನಂ. 638 ಅ ಹಿಸ್ಸಾ 2ಬ ಸ್ವತ್ತನ್ನು ಮಾತ್ರ ಅಳತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಾನು ನನ್ನ ಅರ್ಜಿಯಲ್ಲಿ ನಮೂದಿಸಿದ ಮೂರೂ ಸರ್ವೆ ನಂಬರಗಳನ್ನು ಅಳತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 30-06-2017 ರಂದು ನಡೆಸಲಾದ ಸರ್ವೆ ಕಾರ್ಯಕ್ಕೆ ಸಂಬಂಧಪಟ್ಟಂತೆ ತಯಾರಿಸಲಾದ ನಕಾಶೆಗೆ ಪ್ರತಿವಾದಿಗಳು ತಕರಾರು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಭೂಮಾಪಕರು ಕಾನೂನುಬದ್ಧವಾಗಿ ನಕಾಶೆಗೆ ಅನುಗುಣವಾಗಿ ಅಳತೆ ಕಾರ್ಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸರ್ವೆ ಕಾರ್ಯಕ್ಕೆ ತಕರಾರನ್ನು ಸಲ್ಲಿಸಿದ್ದರೂ ಸಹ ಅದನ್ನು ಸೂಕ್ತ ರೀತಿಯಲ್ಲಿ ಪರಿಗಣಿಸದೇ ನನ್ನ ಆಮಿಷಕ್ಕೆ ಒಳಗಾಗಿ ನನಗೆ ಅನುಕೂಲವಾಗುವ ರೀತಿಯಲ್ಲಿ ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ವಾದಪತ್ರದಲ್ಲಿ ನಮೂದಿಸಿರುವಂತೆ ನಮಗೆ ಸೇರಿದ ಸ್ವತ್ತನ್ನು ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಕಾಶೆಗೆ ತಕರಾರನ್ನು

ಸಲ್ಲಿಸಿದ್ದರೂ ಸಹ ಯಾವುದೇ ತಕರಾರು ಸಲ್ಲಿಸಿರುವುದಿಲ್ಲವೆಂದು ಸುಳ್ಳು ಪ್ರತಿಪಾದನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ